

ಇದು ಹೆಂಗಳೆಯರಿಗೆ ಬಲು ಚೆಂದ. ಪೆಂಡೆಂಟ್ ಧರಿಸಬಹುದು. ದ್ರಾಕ್ಷಿಯ ಗೊಂಚಲುಗಳಂತೆ ಚಿನ್ನದ ಚಪ್ಪಟೆ ರಿಂಗ್‌ಗಳು ಇದ್ದು ಸಡಿಲವಾಗಿರುತ್ತದೆ. ಬಹಳ ಹೊಳಪಿನಿಂದ ಕೂಡಿದ್ದು ಹಗುರವಾಗಿರುತ್ತದೆ. 24 ಇಂಚಿನ ಸರ 12 ಗ್ರಾಂ ಸಾಕು.

**ಗೋಪು (ನೇವಳ) ಸರ**

ಇದು ನುಣುಪಾಗಿದ್ದು ಹಾವು ಹರಿದಾಡಿದಂತೆ ಕಣ್ಣಿಗೆ ಗೋಚರಿಸುತ್ತದೆ. ಇದನ್ನು ಬಹಳ ಜಾಗರೂಕತೆಯಿಂದ ಹ್ಯಾಂಡಲ್ ಮಾಡಬೇಕು. ಒಮ್ಮೆ ತುಂಡಾದರೆ ಪುನಃ ಜೋಡಿಸಲು ಕಷ್ಟ. ಹೊಳಪು ಸದಾ ಇರಬೇಕಾದರೆ ಸ್ನಾನ ಮಾಡುವಾಗ ಧರಿಸಬಾರದು.

**ಸಚೆನ್ ಸರ**

ಇದು ಬಹಳ ಪ್ರಸಿದ್ಧವಾದ ಸರ. ಸಾಧಾರಣ ಎಲ್ಲರೂ ಇಷ್ಟ ಪಟ್ಟು ತೊಡುವ ಸರ ಇದು. ರಿಂಗ್ ಅನ್ನು ಒಂದರ ಒಳಗೆ ಒಂದು ಹೊಗ್ಗಿಸಿ ಹೆಣೆದಂತಹ ಸರ. ಸಪೂರವಾದದ್ದು, ಅಗಲವಾದದ್ದು ಇದರಲ್ಲಿ ಇದೆ. ಅಗಲವಾದದ್ದಾದರೆ ಅದರ ಒಳಗೆ ತೂತು ಕಾಣುತ್ತದೆ. ಸಪುರ ಇರುವುದಾದರೆ ಚಿಕ್ಕ ತೂತು ಇರುತ್ತದೆ. ಈ ಆಭರಣವನ್ನು 2 ರೀತಿಯಲ್ಲಿ ತಯಾರಿಸಲಾಗುತ್ತದೆ. ಚಿನ್ನದ ಪೈಪ್‌ನ ಒಳಗೆ ಟೊಳ್ಳಾಗಿಯೂ, ಸೋಲೀಡಾಗಿಯೂ ಮಾಡಬಹುದು. ಇದನ್ನು 10 ಗ್ರಾಂನಲ್ಲಿ ಮಾಡಿದರೆ 20 ಗ್ರಾಂನ ಸರದಂತೆ ಕಾಣುತ್ತದೆ. ಆದರೆ ಜಾಗರೂಕರಾಗಿರಬೇಕು.

**ಕಟ್ಸ್ ಸರ (ಮೆಂತೆ ಚೈನ್)**

ಬಹಳ ಕಾಲ ಬಾಳಿಕೆ ಬರುವ ಸರ ಇದು. ಹ್ಯಾಂಡ್ ಮೇಡ್ ಹೊಳಪನ್ನು ತರಲು ಮಿಶನ್ ಕಟ್ಟಿಂಗ್ ಮಾಡಲಾಗುತ್ತದೆ. 18 ಇಂಚಿಗೆ ಸಾಧಾರಣ 12ಗ್ರಾಂ ಇದ್ದರೆ ಸದೃಢವಾಗಿರುತ್ತದೆ. ನಿತ್ಯ ಬಳಕೆಗೆ ಯೋಗ್ಯ.

**ಸ್ಕ್ವೇರ್ ಚೈನ್**

ಅನಾದಿಕಾಲದಿಂದಲೂ ದೀರ್ಘ ಬಾಳಿಕೆಯ ಸರ. ಇದು ಸಂಪೂರ್ಣವಾಗಿ ಕುಶಲಕರ್ಮಿಗಳು ಕೈಯಲ್ಲೇ ಮಾಡುವಂತಹದ್ದು, ಈಗ ಇದಕ್ಕೆ ಹೊಳಪು ಬರಲು ಕೆತ್ತನೆ ಮಾಡುತ್ತಾರೆ. ಅತೀ ತೆಳ್ಳಗೆ ಬೇಕಾದರೂ ಮಾಡಬಹುದು. ಗಟ್ಟಿ ಬರುತ್ತದೆ. ಜೊತೆಗೆ ಇಂದಿನ ಈ ಫ್ಯಾಷನ್ ಯುಗದಲ್ಲಿ ತೆಳ್ಳಗೆ ಇದ್ದು ದೀರ್ಘ ಬಾಳಿಕೆ ಇಷ್ಟ ಪಡುವವರು ಇದನ್ನು ಬಳಸಬಹುದು.

**ಯಸ್ ಚೈನ್**

ಇದು ಡೈ ಪೀಸನ್ನು ಬಳಸಿ ಮಾಡುವಂತಹದ್ದು. ಇದು ಕಡಿಮೆ ಚಿನ್ನದಲ್ಲಿ ಅಬ್ಬರ ಕಾಣುತ್ತದೆ. 18 ಇಂಚಿಗೆ 10 ಗ್ರಾಂ ಸಾಕಾಗುತ್ತದೆ. ಅಗಲವಾಗಿ ಕಾಣುತ್ತದೆ.

**ಮಿಸರಿ ಸರ**

ಕ್ರೀ ಚಿತ್ರಣವನ್ನು ಹೊಂದಿದ ಡೈ ಇದ್ದು ಒಂದಕ್ಕೊಂದು ಬೆಸೆದಂತಹದ್ದು ಕಡಿಮೆಯಲ್ಲಿ 14 ಗ್ರಾಂ ಬೇಕು . 22 ಇಂಚು ಇದ್ದರೆ ಸೊಗಸು. ಇದಲ್ಲದೆ ಲೀಫ್ ಸರ ಬೇರೆ ಬೇರೆ ಡೈ ಹೊಂದಿ ತಯಾರಿಸಿದ ಸರ ಇದೆ.

**ಸ್ವಾತಿ ಸರ**

ಗೋಲಾಕಾರದ ಗುಂಡಿಗೆ ಇನ್ನೊಂದು ಸುತ್ತಲೂ ರಿಂಗ್ ಇದ್ದು ಬಹಳ ಸುಂದರವಾಗಿ ಪೋಣಿಸಿದಂತಹದ್ದು.

**ಬಾಕ್ಸ್ ಚೈನು**

ಇದು ನೋಡಲು ಬಾಕ್ಸ್‌ಗಳನ್ನು ಜೋಡಿಸಿ ಇಟ್ಟಿದ್ದು , ಸದೃಢವಾಗಿ 4 ಗ್ರಾಂ ನಲ್ಲಿ ಪ್ರಾರಂಭವಾಗುತ್ತದೆ. ಇದು ಮೆಷಿನ್ ಮೇಡ್.

**ಧ್ರುವ, ದಳಪತಿ, ತ್ರೀ ರಿಂಗ್ ಚೈನ್**

ಇದು ನೋಡಲು ಒಂದೇ ತರದಲ್ಲಿದ್ದು ವೃತ್ತಾಕಾರವಾದ ವಿನ್ಯಾಸ ಹೊಂದಿದ್ದು, ಒಂದಕ್ಕೊಂದು ಬೆಸೆದುಕೊಂಡಿದೆ. 3 ರಿಂಗ್‌ಗಳಲ್ಲೂ ಟೊಳ್ಳಾಗಿರುವಂತಹದ್ದು, ಸಾಲಿಡ್ ಆಗಿ ಇರುವುದು ಇದೆ. ಚಿನ್ನದ ಬಳಕೆಯನ್ನು ಹೊಂದಿಸಿಕೊಂಡು ಅಗಲ, ಸದೃಢ ವಿನ್ಯಾಸದಲ್ಲಿ ಮಾಡಬಹುದು.

**ಡೆಲ್ಲಿ ಸರ**

ಇದು ಅಗಲವಾಗಿದ್ದು 2 ಸರ ಸೇರಿದಂತಿದ್ದು ಸುಂದರವಾಗಿರುತ್ತದೆ. ಸಾಧಾರಣ ಕರಿಮಣಿ ಸರ, 2 ಎಳೆ ಮುತ್ತಿನ ಸರದ ಮಧ್ಯೆ ಮಧ್ಯೆ ಈ ಸರ ಬಳಸುತ್ತಾರೆ.

**ಕೊತ್ತಂಬರಿ ಸರ**

ಗುಂಡಗಿನ ಗುಂಡುಗಳ ತರ ಇರುವ ಚಿನ್ನದ ಸರ. ಇದು ಪ್ರಾಚೀನ ಕಾಲದಿಂದ ಬಳಕೆಯಲ್ಲಿದ್ದು 2 ಎಳೆ ಸರ, 3 ಎಳೆ ಸರವಾಗಿ ಧರಿಸುತ್ತಾರೆ. ಇದನ್ನು ಗುಂಡು ಸರಿಗೆಯಲ್ಲಿ ಪೋಣಿಸಿ ಧರಿಸುತ್ತಾರೆ. ಈ ಗುಂಡಗಿನ ಗುಂಡುಗಳನ್ನು ಕಂಠಿ, ಮುತ್ತಿನ ಸರಕ್ಕೂ ಪೋಣಿಸುತ್ತಾರೆ. ನಿತ್ಯ ಬಳಕೆಗೆ ಒಳ್ಳೆದು. ಇದರಲ್ಲಿ ಕೆತ್ತನೆ ಬಂದರೆ ಕಟ್ಸ್ ಗುಂಡು ಎಂದು ಕರೆಯುತ್ತಾರೆ.

**ಅಡ್ಡಿಗೆ ಸರ**

ಸಪುರವಾದ ಸರಿಗೆಯ ರಿಂಗ್ ಮಾಡಿ ಒಂದರೊಳಗೊಂದು ಹತ್ತಿರವಾಗಿ ಹಣೆದು ಮಾಡಿದ ಸದೃಢವಾದ ಚೈನು. ಮಕ್ಕಳಿಗೂ ಬಲು ಹಿತ ಇದು.

## ಅಲಂಕಾರಕ್ಕೆ ಯೋಗ್ಯವಾದ ಸರ

ಇಂದು ಮಾರುಕಟ್ಟೆಯಲ್ಲಿ ಹೇರಳವಾಗಿ ಫ್ಯಾನ್ಸಿ ವಿನ್ಯಾಸದ ಹಲವಾರು ಸರಗಳು ಲಭ್ಯವಿದೆ. ಅವರವರ ಭಾವಕ್ಕೆ, ಸಮಾರಂಭಗಳನ್ನು ಹೊಂದಿಕೊಂಡು ಸರಗಳ ಆಯ್ಕೆ ಮಾಡಬೇಕು. ಮೇಲೆ ಹೇಳಿದ ಸರಗಳೂ ಅಲಂಕಾರಕ್ಕೆ ಯೋಗ್ಯವಾದವೇ ಗಮನಿಸಬೇಕಾದ ವಿಷಯ ಏನೆಂದರೆ ಎರಡೆಳೆ, ಮೂರು ಎಲೆಯಾಗಿ ಯಾವ ಚೈನನ್ನು ಹಾಕಬೇಕು, ಪೆಂಡೆಂಟ್ ಹಾಕಿ ಧರಿಸಬೇಕಾದ ಸರ ಎಷ್ಟು ಗ್ರಾಂ, ಎಷ್ಟು ಉದ್ದ. ನಮ್ಮ ಶರೀರವನ್ನು ಹೊಂದಿಕೊಂಡು ನೋಡಿ ಖರೀದಿಸಿ ಧರಿಸಬೇಕು. ಕೊನೆಗೆ ಒಂದು ಮಾತು ಕೇವಲ ಚಿನ್ನ ಮಾತ್ರ ಹೊಂದಿದ ಚೈನು ನಿರ್ವಹಣೆ ಮಾಡಲು ಬಲು ಸುಲಭ.